


### ಗೋಲ್ಡ್ ರಷ್‌ನ ಸಮಗ್ರ ಮಾಹಿತಿ

ಗೋಲ್ಡ್ ರಷ್ ಮಾಲತಿ ಭಟ್‌ರ ಮುಖಪುಟ ಲೇಖನದಲ್ಲಿ ಬಂಗಾರದ ಬಗ್ಗೆ ಸಮಗ್ರ ಮಾಹಿತಿ ಇದೆ. ಸಂಗ್ರಹಯೋಗ್ಯ ಸಂಚಿಕೆ.

-ಶಾರದಾ ಹೊನಕೇರಿ, ಶಿಗ್ಲಿ- ಶಿರಹಟ್ಟಿ, ಪಿ.ಗೋವಿಂದರಾಜ್, ಶಿವಮೊಗ್ಗ, ಎಂ.ಆರ್.ಶೋಭಾಶೇಖರ್, ದೊಡ್ಡಬಳ್ಳಾಪುರ/ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಅಚ್ಚುಕಟ್ಟಾದ ಅವಳ ಅಂತ್ಯ!

ವೆಂಕಟೇಶ. ಕೆ. ಜನಾದ್ರಿರವರ 'ಅವಳ ಅಂತ್ಯ' ನಿರೀಕ್ಷೆಯಂತೆ ನಾಯಕಿಯ ಸಾವಿನೊಂದಿಗೆ ಮುಕ್ತಾಯವಾಗಿದೆ. ಕಥೆಯ ನಿರೂಪಣೆ ಅಚ್ಚುಕಟ್ಟಾಗಿ ಮೂಡಿಬಂದಿದೆ.

-ನೆ.ಸು. ಆನಂದ್, ಕತ್ತರಗುಪ್ಪ, ಬೆಂಗಳೂರು

> **ಬಳೆ!**
>
> ಪ್ರಿಯೆ,
> ಏರುತ್ತಲೇ ಇದ್ದರೆ ಹೀಗೆ,
> ಚಿನ್ನದ ಬೆಲೆ,
> ಹೇಗೆ ತಾನೆ ಮಾಡಿಸಿಕೊಡಲಿ ನಿನಗೆ
> ಚಿನ್ನದ ಬಳೆ?
> ಬಾ ಸದ್ಯಕ್ಕೆ ಕೊಂಡುಕೊಳ್ಳೋಣ,
> ಒಂದು ಡಜನ್
> ಕೋಡುಬಳೆ!
>
> -ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಚಾಕಚಕ್ಯತೆಯ ಉತ್ತರ

ನೀವು ಕೇಳಿದಿರಿ? ವಿಭಾಗದಲ್ಲಿ ಪ್ರಶ್ನೆಗಳು ಎಷ್ಟು ಅನ್ಯೋನ್ಯ ವಾಗಿರುತ್ತವೆಯೋ ಉತ್ತರಗಳೂ ಅಷ್ಟೇ ಚಾಕಚಕ್ಯತೆಯಿಂದ ಕೂಡಿರುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

-ಪಿ.ಎಸ್. ಶ್ರೀವತ್ಸ, ಬೆಂಗಳೂರು

### ವಿಧವೆಗೆ ಅವಮಾನ

'ನೀವು ಕೇಳಿದಿರಿ' ವಿಭಾಗದಲ್ಲಿ 'ವಿಧವೆ ಮರು ಮದುವೆಯಾಗುವಾಗ ಮೊದಲನೆಯ ಗಂಡನನ್ನು ಮರೆತು ಬಿಡುವಳೇ?' ಎಂಬ ಪ್ರಶ್ನೆಗೆ ರಾಮ್‌ರವರು 'ಇಲ್ಲ ಥ್ಯಾಂಕ್ಸ್ ಫಾರ್ ಮೇಕಿಂಗ್ ಮಿ ಎ ವಿಧವೆ ಎನ್ನುವಳು' ಎಂದಿದ್ದಾರೆ. ಈ ಉತ್ತರ ಮರುಮದುವೆ ಮಾಡಿಕೊಳ್ಳಬಹುದಾದ ವಿಧವೆಯರಿಗೆ ಅವಮಾನ ಮತ್ತು ದುಃಖವನ್ನು ಉಂಟುಮಾಡಿದೆ.

-ಶ್ರೀನಾಥ್ ಕೊನೇಟಿ, ಬೆಂಗಳೂರು

### ಕಸದಿಂದ ರಸ

ಉತ್ತರಾಣಿ ಕಸದಿಂದ ರಸ ತೆಗೆಯುವ ಔಷಧಿಯು ಎಷ್ಟೊಂದು ಉಪಯೋಗಕ್ಕೆ ಆಗುತ್ತದೆ ಎಂಬುದನ್ನು ಲೇಖಕಿ ಬಿ.ವಿ. ರಶ್ಮಿ ಸವಿಸ್ತಾರವಾಗಿ ತಿಳಿಸಿದ್ದಾರೆ.

-ಬಿ.ಎಸ್. ಮುಳ್ಳೂರು, ಹಲಗತ್ತಿ

### ಕನ್ನಡ ಶಾಲೆ ಮಾರಾಟ ವಿಷಾದ

ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿಯೇ ಪ್ರಕಟವಾದ 'ಕನ್ನಡ ಶಾಲೆ ಮಾರಾಟಕ್ಕಿದೆ' ಲೇಖನ ಓದಿ ತೀವ್ರ ವಿಷಾದವಾಯಿತು!

-ತರಂಗಿಣಿ, ತುಮಕೂರು/ ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ

### ರಸಿಕರ ಬಳಿಗೇ ಕಲಾವಿದ

ದೇಶವನ್ನೇ ಸುತ್ತುವುದರೊಂದಿಗೆ ಅಲ್ಲಲ್ಲ ಹುಟ್ಟುಪಡೆದ ಕಲಾಕೃತಿಗಳನ್ನು ಎಲ್ಲೆಲ್ಲೋ ಇರುವ ಕಲಾರಸಿಕರ ಬಳಿಗೆ ಹೊತ್ತೊಯ್ಯುವ ಕಲಾವಿದ ಎ.ಕೆ. ನಾಗರಾಳ ಅವರ ಪ್ರಯತ್ನಕ್ಕೆ ಅಭಿನಂದನೆಗಳು. ದಿಲ್ ಲೇಖನ ಅರ್ಥಪೂರ್ಣವಾಗಿತ್ತು.

-ರವೀಂದ್ರನಾಥ ಶಿ. ಯಡಹಳ್ಳಿ, ಬಾಗಲಕೋಟೆ
ಕಾಳೀಹುಂಡಿ ಶಿವಕುಮಾರ್, ಮೈಸೂರು

### ಪದಬಂಧದಲ್ಲಿ ತಪ್ಪು- ವಿಷಾದ

ನವೆಂಬರ್ 4ರ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಪದಬಂಧ'ಕ್ಕೆ ಸಂಬಂಧಿಸಿದಂತೆ ಸುಳಿವುಗಳು ಮತ್ತು ಅವುಗಳ ಕ್ರಮ ಸಂಖ್ಯೆಗಳು ತಾಳೆಯಾಗದೆ ಗೊಂದಲವಾಗಿರುತ್ತದೆ.

-ಪಿ.ಎ. ಸುಧೀಂದ್ರ, ಬೆಂಗಳೂರು/ ಪಿ.ಎಸ್.ಭಟ್, ಪಳ್ಳತ್ತಡ್ಕ-ಕಾಸರಗೋಡು

ಹೌದು ತಪ್ಪಾಗಿದೆ; ಅದಕ್ಕಾಗಿ ವಿಷಾದಿಸುತ್ತೇವೆ. - ಸಂ.


